MVC No. 8/2021 PW-1

**ದಿನಾಂಕ 21.09.2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಎದುರುದಾರರಾದ ಆರ್ 2 ಪರ ವಕೀಲರಿಂದಃ

ನಾನು ಅಪಘಾತವಾದ ದಿನ ಮದ್ದೂರಿನಿಂದ ನಮ್ಮ ಗ್ರಾಮವಾದ ತೈಲೂರಿಗೆ ಹೋಗುತ್ತಾ ಇದ್ದೆ. ನಾನು ದ್ವಿಚಕ್ರ ವಾಹನವದಲ್ಲಿ ಹೋಗುತ್ತಾ ಇದ್ದೆ. ಸದರಿ ದಿನ ನಾನು ಒಬ್ಬನೇ ಹೋಗುತ್ತಿದ್ದೆ. ಸದರಿ ವಾಹನ ನನಗೇ ಸೇರಿದ್ದಾಗಿರುತ್ತದೆ. ನನ್ನ ಬಳಿ ಡಿಎಲ್ ಇದೆ ಹಾಗೂ ವಾಹನಕ್ಕೆ ಸಂಬಂದಪಟ್ಟಂತೆ ಆರ್ ಸಿ, ವಿಮಾ ಪಾಲಿಸಿ ಇದೆ ಅದನ್ನು ನಾನು ವಕೀಲರಿಗೆ ನೀಡಿರುತ್ತೇನೆ. ಸದರಿ ಅಪಘಾತ ದಿಃ27.12.2019 ರಂದು ಆಗಿರುತ್ತದೆ. ಅಪಘಾತ ವೈದ್ಯನಾಥೇಶ್ವರ ಸೇತುವೆ ಬಳಿ ಆಗಿರುತ್ತದೆ. ಸದರಿ ಸ್ಥಳದಲ್ಲಿ ನನಗೆ ಟ್ರಾಕ್ಟರ್ ಮುಂದುಗಡೆಯಿಂದ ಡಿಕ್ಕಿ ಪಡಿಸಿರುತ್ತದೆ. ಸದರಿ ಟ್ರಾಕ್ಟರ್ ಅನ್ನು ನಾನು 150 ಅಡಿ ಅಂತರದಿಂದ ನೋಡಿರುತ್ತೇನೆ. ಸದರಿ ಟ್ರಾಕ್ಟರ್ ನ ನೊಂದಣಿ ಸಂಖ್ಯೆಯನ್ನು ನಾನು ನೋಡಿಲ್ಲ.ಆದರೆ ಅಲ್ಲಿದ್ದ ಜನರು ನೋಡಿರುತ್ತಾರೆ. ನನಗೆ ಅಪಘಾತವಾದ ತಕ್ಷಣ ಪ್ರಜ್ಞೆ ಇರಲಿಲ್ಲ. ನನಗೆ ಪ್ರಜ್ಞೆ ಬಂದ ವೇಳೆಯಲ್ಲಿ ನಾನು ರಾಜರಾಜೇಶ್ವರಿ ಆಸ್ಪತ್ರೆಯಲ್ಲಿ ಇದ್ದೆ. ನನಗೆ ಪ್ರಜ್ಞೆ ಬಂದಾಗ ನನ್ನ ಎಡಗಾಲು, ನನ್ನ ಎಡಗೈ, ಕಣ್ಣು, ಗಲ್ಲಕ್ಕೆ ಪೆಟ್ಟಾಗಿತ್ತು. ನನಗೆ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆಯನ್ನು ಮಾಡಿಲ್ಲ ಕಾರಣ ಶಸ್ತ್ರ ಚಿಕಿತ್ಸೆ ಮಾಡಿದರೂ ಕೂಡ ಸ್ವಾದೀನ ಬರುವುದಿಲ್ಲವೆಂದು ಶಸ್ತ್ರ ಚಿಕಿತ್ಸೆಯನ್ನು ಮಾಡಿಲ್ಲ. ನಾನು ಆಸ್ಪತೆರಯಲ್ಲಿ 2 ತಿಂಗಳು ಚಿಕಿತ್ಸೆ ಪಡೆದಿರುತ್ತೇನೆ. ನಾನು ಆಸ್ಪತ್ರೆಯಲ್ಲಿದ್ದಾಗ ಚಿಕಿತ್ಸೆಗಾಗಿ 5 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿರುತ್ತೇನೆ. ನಾನು ಆರೋಗ್ಯ ವಿಮೆಯನ್ನು ಮಾಡಿಸಿಲ್ಲ. ನನಗೆ ಅಪಘಾತವಾಗುವುದಕ್ಕಿಂತ ಮುಂಚೆಯಿಂದಲೂ ಸಕ್ಕರೆ ಖಾಯಿಲೆ ಇತ್ತು. ಆ ಬಗ್ಗೆ ನಾನು ಚಿಕಿತ್ಸೆ ಪಡೆಯುತ್ತಾ ಇದ್ದೆ. ಈ ಅಪಘಾತ ನನ್ನ ತಪ್ಪಿನಿಂದ ಆಗಿರುತ್ತದೆ ಟ್ರಾಕ್ಟರ್ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಬಳಿ ಡಿಎಲ್ ಇಲ್ಲದೇ, ನನ್ನ ವಾಹನಕ್ಕೆ ವಿಮಾ ಪಾಲಿಸಿ ಇಲ್ಲದೇ ವಾಹನವನ್ನು ಚಾಲನೆ ಮಾಡಿಕೊಂಡು ಹೋಗಿ ನನ್ನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಈ ಅಪಘಾತಕ್ಕೆ

ನಾನೇ ಕಾರಣನಾಗಿರುತ್ತೇನೆ ಟ್ರಾಕ್ಟರ್ ಚಾಲಕನ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸ ರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ನನ್ನ ವೈದ್ಯಕೀಯ ಚಿಕಿತ್ಸೆಗಾಗಿ 5 ಲಕ್ಷ ರೂಪಾಯಿ ಹಣ ಖರ್ಚಾಗಿದೆ ಎಂದು ಹೇಳಿದ್ದು ಅದು ಸುಳ್ಳು ಮತ್ತು ಆ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನಾನು ಅಪಘಾತವಾಗುವುದಕ್ಕಿಂತ ಮುಂಚೆ ಅರವಿಂದ್ ಗಾರ್ಮೆಂಟ್ಸ್ ನಲ್ಲಿ ತಾತ್ಕಾಲಿಕವಾಗಿ ಕೆಲಸ ಮಾಡತ್ತಿದ್ದೆ. ಸದರಿ ಗಾರ್ಮೆಂಟ್ಸ್ ನಲ್ಲಿ ನನಗೆ ತಿಂಗಳಿಗೆ 15 ಸಾವಿರ ರೂಪಾಯಿ ಸಂಬಳ ಕೊಡುತ್ತಿದ್ದರು. ನಾನು ಸದರಿ ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ನನ್ನ ವೇತನ ಪತ್ರ ಮತ್ತು ಸದರಿ ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ನೀಡಿದ ದೃಢೀಕರಣವನ್ನು ಹಾಜರುಪಡಿಸಬಹುದು. ಅರವಿಂದ್ ಗಾರ್ಮೆಂಟ್ಸ್ ನ ಕಂಪನಿಯ ಅಧಿಕಾರಿಗಳನ್ನು ಸಾಕ್ಷ್ಯಾ ಕೊಡಿಸಲು ತೊಂದರೆ ಇಲ್ಲ. ಈಗ ನಾನು ಸದರಿ ಕಂಪನಿಯಲ್ಲಿ ಕೆಲಸ ಮಾಡುತ್ತಿಲ್ಲ. ಈಗ ನಾನು ಜೀವನಕ್ಕಾಗಿ ಏನೂ ಮಾಡುತ್ತಿಲ್ಲ ನನ್ನ ಪತ್ನಿ ದುಡಿದು ನನ್ನನ್ನು ಸಾಕುತ್ತಿದ್ದಾರೆ. ನನಗೆ ಜಮೀನು ಇಲ್ಲ. ನಾನು ಈಗ ಬೇರೆ ಕಡೆ ಕೆಲಸ ಮಾಡಿ ಸಂಪಾದನೆ ಮಾಡುತ್ತಿದ್ದೇನೆ ಆದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅಪಘಾತವಾದ ತಕ್ಷಣ ಪೋಲಿಸರಿಗೆ ನನ್ನ ತಮ್ಮ ಮಾಹಿತಿಯನ್ನು ನೀಡಿರುತ್ತಾರೆ. ಅಪಘಾತವಾದ 3 ದಿನದ ನಂತರ ದೂರನ್ನು ನೀಡಿರುತ್ತಾರೆ. ಅಪಘಾತವಾದ ಸಮಯದಲ್ಲಿ ನನಗೆ 39 ವರ್ಷ ವಯಸ್ಸಾಗಿತ್ತು. ಈಗ ನನ್ನ ಆರೋಗ್ಯ ಚೆನ್ನಾಗಿದೆ , ಆದರೂ ಸಹ ಪರಿಹಾರ ಪಡೆಯುವ ಉದ್ದೇಶದಿಂದ ನಾನು ಸುಳ್ಳು ಮಾಹಿತಿಯನ್ನು ನೀಡಿರುತ್ತೇನೆಂದರೆ ಸರಿಯಲ್ಲ. ಈ ಅಪಘಾತದಿಂದ ನನಗೆ ಯಾವುದೇ ರೀತಿಯ ಆರ್ಥಿಕ ನಷ್ಟ ಉಂಟಾಗಿಲ್ಲ ಎಂದರೆ ಸರಿಯಲ್ಲ. ನಾನು ಹೆಚ್ಚುವರಿ ಪರಿಹಾರ ಪಡೆಯಲು ಸುಳ್ಳು ಕೇಸು ದಾಖಲಿಸಿ, ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

(ಶುಭಾ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.